ಬೆಳಗ್ಗೆ ಸಾಹೇಬರ ಆಗಮನವಾಗುತ್ತಿದ್ದಂತೆ ಠಾಣೆಯು ಸೂಜಿ ಬಿದ್ದರೂ ಕೇಳಿಸುವಷ್ಟು ನಿಶ್ಯಬ್ದವಾಗುತ್ತಿತ್ತು. ಠಾಣೆಯ ಬಳಿ ಅವರಿವರನ್ನು ವಿಚಾರಿಸಿಕೊಂಡುಬರುತ್ತಿದ್ದ ವೇಸ್ಟು ಬಾಡಿಗಳೆಲ್ಲಾ ಜೀಪು ಕಾಣುತ್ತಿದ್ದಂತೆ ಚದುರಿಬಿಡುತ್ತಿದ್ದವು. ಎದುರು ಸಿಕ್ಕವರ ಕಾಲೆಳೆಯುತ್ತಾ ತಮಾಷಿ ಮಾಡಿಕೊಂಡು ಕೇಕೆ ಹಾಕುತ್ತಿದ್ದ ಸಮನ್ಸು ವಾರಂಟಿನವರೆಲ್ಲಾ ಪಿಸಪಿಸನೆ ಮಾತನಾಡಿಕೊಂಡು ಜಾಗ ಖಾಲಿ ಮಾಡುತ್ತಿದ್ದರು. ಬೆಳ್ಳಬೆಳಗ್ಗೆಯೇ ಎಂಗಪ್ಪಾ ಕೆಲಸ ಶುರು ಮಾಡೋದು ಎಂದು ಮೀನ ಮೇಷ ಎಣಿಸಿಕೊಂಡು ರೇಷನ್ನು, ಮಕ್ಕಳ ಕಾನ್ವೆಂಟು ಬಿಲ್ಲುಗಳಂತ ಜನರಲ್ ಸಬ್ಜೆಕ್ಟಾಧಾರಿತ ಚರ್ಚೆಗಳನ್ನು ಶುರು ಹಚ್ಚಿಕೊಳ್ಳುತ್ತಿದ್ದ ಕಂಪ್ಯೂಟರಿನವರು ಮತ್ತು ಬರಹಗಾರರು ಸಾಹೇಬರು ತಮ್ಮ ಸಿಂಹಾಸನದಲ್ಲಿ ಆಸೀನರಾಗುತ್ತಿದ್ದಂತೆ ಬೆಳಗಿನಿಂದಲೂ ಹೀಗೇ ಇದ್ದರೇನೋ ಎಂಬಂತೆ ತಲೆ ಬಗ್ಗಿಸಿಕೊಂಡು ಕೆಲಸಗಳಲ್ಲಿ ಮುಳುಗಿಬಿಡುತ್ತಿದ್ದರು. ಸರ್ಕಲ್ಲು ಸಾಬರ ಉಪಸ್ಥಿತಿ ಹೀಗೆ ಇಡೀ ಠಾಣಾ ವಾತಾವರಣವನ್ನೇ ಉಲ್ಟಾಪಲ್ಟಾ ಮಾಡುತ್ತಿದ್ದರೆ ನೋಡುತ್ತಾ ನಾವು ಅಚ್ಚರಿಪಡುತ್ತಿದ್ದೆವು. ಮುಂದೆ ಸ್ವತಂತ್ರ ಠಾಣಾಧಿಕಾರಿಗಳಾದ ಮೇಲೆ ನಾವೂ ಇದೇ ರೀತಿ ಇಮೇಜು ಮೆಂಟೇನು ಮಾಡಬೇಕೆಂದು ಎಷ್ಟೋ ಬಾರಿ ನಾನೂ ಮನೋಜನೂ ಅಂದುಕೊಳ್ಳುತಿದ್ದುದುಂಟು. ಮುಖ್ಯವಾಗಿ ಅವರಿಗಿದ್ದ ಪರ್ಸನಾಲಿಟಿಯಲ್ಲಿ ಕಾಲು ಭಾಗವೂ ನಮಗಿರಲಿಲ್ಲ... ಮಾಡುವುದೆಂತು?

ಪ್ರತಿದಿನ ಬೆಳಗ್ಗೆ ಸಾಹೇಬರು ದಯಮಾಡಿಸುವುದಕ್ಕೂ ಮುಂಚೆಯೇ ಸುಮಾರು ಮಂದಿ ಬಂದು ಕಾಯುತ್ತಾ ಕುಳಿತುಕೊಳ್ಳುತಿದ್ದರು. ರಾತ್ರಿ ಕಂಠಮಟ ಕುಡಿದು ಕತ್ತಿನ ಪಟ್ಟಿ ಹಿಡಿದು ಹೊಡೆದಾಡಿಕೊಂಡವರು, ಮಕ್ಕಳು ಮಾಡಿಕೊಂಡ ಜಗಳವನ್ನೇ ನೆಪ ಮಾಡಿ ತಲೆಜುಟ್ಟು ಜಗ್ಗಿ ಎಳೆದಾಡಿಕೊಂಡ ನೆರೆಹೊರೆ ನಾರೀಮಣಿಗಳು ಮತ್ತು ಅವರನ್ನು ಬೆಂಬಲಿಸಿದ ಗಂಡಂದಿರು, ಕೊಟ್ಟ ಸಾಲ ಕೇಳಲು ಹೋಗಿ ಒದೆ ತಿಂದವರು... ಹೀಗೆ ನಾನಾ ತರದ ಮಂದಿ ಬೆಳಬೆಳಗ್ಗೆಯೇ ಮುಖ ಮೂತಿ ಮತ್ತೊಂದು ಊದಿಸಿಕೊಂಡು ಸಾಹೇಬರ ವಿಚಾರಣೆ ಎದುರಿಸಲು ಸರದಿ ಕಾಯುತ್ತಾ ನಿಂತಿರುತ್ತಿದ್ದರು.

ಇನ್ನು ಎರಡೂ ಕಡೆಯ ಪಾರ್ಟಿಗಳಿಗೆ ಪರಿಚಯವಿರುತ್ತಿದ್ದ, ಊರ ಗಣ್ಯರೆಂದು ಹಣೆಪಟ್ಟಿ ಹೊತ್ತ ಕೆಲವರು ತಮ್ಮ ವರ್ಚಸ್ಸು ಹೆಚ್ಚಿಸಿಕೊಳ್ಳಲು ಮತ್ತು ಸಾಹೇಬರ ಆಪ್ತವಲಯಕ್ಕೆ ಸೇರ್ಪಡೆಯಾಗಲು ಇದುವೇ ಸುಸಮಯವೆಂದು ಭಾವಿಸಿ ಸ್ವಯಂಪ್ರೇರಿತ ಶ್ವೇತವಸ್ತ್ರಧಾರಿಗಳಾಗಿ ಠಾಣೆಯೆಡೆಗೆ ಬಿಜಯಂಗೈಯುತ್ತಿದ್ದರು. ಜೀಪು ಠಾಣಾ ಆವರಣ ಪ್ರವೇಶಿಸಿ ಒಳಬರುತ್ತಿದ್ದಂತೆ ಎದುರು ನಿಂತು ಸಾಹೇಬರಿಗೆ ತಮ್ಮ ಮುಖದರ್ಶನ ಮಾಡಿಸಿ ಯಾವುದೋ ಘನ ಕಾರ್ಯಾರ್ಥವಾಗಿ ತಾವು ಬಂದಿರುವುದನ್ನು ತಿಳಿಯಪಡಿಸುತ್ತಿದ್ದರು. ತಮ್ಮ ಕೋಣೆಯನ್ನು ಪ್ರವೇಶಿಸುವಷ್ಟರಲ್ಲಿ ಅವರನ್ನೊಮ್ಮೆ ಕಿರುಗಣ್ಣಿನಲ್ಲಿ ಅವಲೋಕಿಸುತ್ತಿದ್ದ ಸಾಹೇಬರು ಯಾವ ಭಾವನೆಗಳನ್ನೂ ತೋರಗೊಡದೆ ಒಳನಡೆಯುತ್ತಿದ್ದುದು ಅಷ್ಟೇ ಸಹಜವಾಗಿತ್ತು.

ಟೇಬಲ್ಲಿನ ಗಾಜುಹಾಸಿನಡಿಯಲ್ಲಿದ್ದ ಇಷ್ಟದೈವದ ಫೋಟೋಗೆ ನಮಸ್ಕಾರ ಹಾಕುತ್ತ ಸಾಹೇಬರು ಸೀಟನ್ನಲಂಕರಿಸುತ್ತಿದ್ದ ದೃಶ್ಯ ವೀಕ್ಷಣೀಯವಾಗಿರುತ್ತಿತ್ತು. ನಾನು ಮತ್ತು ಮನೋಜ ಸಾಧ್ಯವಾದಷ್ಟೂ ಈ 'ಸೀನ್' ಅನ್ನು ಮಿಸ್ಸು ಮಾಡಿಕೊಳ್ಳುತ್ತಿರಲಿಲ್ಲ. ಯಾಕೆಂದರೆ ಅವರು ಸೀಟನ್ನು ಒರಗಿ ಕೂಡುತ್ತಿದ್ದಂತೆಯೇ ಬೀಳುತ್ತಿದ್ದ ಮೊದಲ ಸಲ್ಯೂಟುಗಳು ನಮ್ಮವೇ ಆಗಿರುತ್ತಿದ್ದವು. ಸಾಹೇಬರ ರೈಟುಹ್ಯಾಂಡೆಂದೇ ಬಿರುದಾಂಕಿತನಾದ ಸಹಾಯಕ ವೆಂಕಟೇಶನು ನಮ್ಮ ಹಿಂದೆಯೇ ನುಸುಳಿ ಬಂದು ತನ್ನದೊಂದು ಸಲ್ಯೂಟನ್ನು ತೂರುತ್ತ ಅವತ್ತಿನ ದಿನಪತ್ರಿಕೆಗಳನ್ನು ಟೇಬಲ್ಲಿನ